**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.</u>**

**ಅಪರಾಧ ಪ್ರಕರಣ ಸಂಖ್ಯೆಃ 623/2018**

| | | |
|---|---|---|
| **ಹೆಸರು** | ಲಕ್ಷ್ಮಮ್ಮ | ಚಾಸಾ-1 |
| **ಗಂಡನ ಹೆಸರು** | ಅಣ್ಣಯ್ಯ | |
| **ಉದ್ಯೋಗ** | ಕೂಲಿ ಕೆಲಸ | ಪ್ರಾ ಸಾ-1 |
| **ವಾಸ ಸ್ಥಳ** | ಮುತ್ತಿಗೆ ಗ್ರಾಮ | |
| **ದಿನಾಂಕಃ 10.10.2024**ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ</u>**

ಆರೋಪಿಯ ಪರಿಚಯ ನನಗೆ ಇರುತ್ತದೆ. ಆರೋಪಿಯು ನಮ್ಮ ಊರಿನವರು. ಸುಮಾರು 4 ವರ್ಷಗಳ ಹಿಂದೆ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಮುತ್ತಿಗೆಯಲ್ಲಿರುವ ನಮ್ಮ ಜಮೀನಿನಲ್ಲಿ ಟ್ರಾಕ್ಟರ್ ನಲ್ಲಿ ಉಳುಮೆ ಮಾಡುತ್ತಿದ್ದಾಗ ಆರೋಪಿಯು ನಮ್ಮ ಟ್ರಾಕ್ಟರ್ ಗೆ ಅಡ್ಡಗಟ್ಟಿರುತ್ತಾರೆ. ಆಗ ನಾನು ಆರೋಪಿಗೆ ಏಕೆ ಅಡ್ಡಗಟ್ಟಿದ್ದೀಯಾ ಎಂದು ಕೇಳಿದಾಗ ಆಗ ಆರೋಪಿಯು ನನ್ನ ಕೈಯನ್ನು ಹಿಡಿದು ಎಳೆದು ನನ್ನ ಬಲಗೈನ ಕಿರುಬೆರಳನ್ನು ಕಚ್ಚಿದರು. ಆರೋಪಿಯು ನನಗೆ ಮೈಕೈಗೆ, ಎದೆಗೆ ಆಕೆಯ ಕೈಯಿಂದ ಹೊಡೆದಿರುತ್ತಾರೆ. ನಂತರ ಟ್ರಾಕ್ಟರ್ ನ ಚಾಲಕ ಮತ್ತು ನನ್ನ ಗಂಡ ನನ್ನನ್ನು ಅರಕಲಗೂಡು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು.

1) ದಿನಾಂಕ 18.05.2018 ರಂದು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಸದರಿ ಹೇಳಿಕೆಯನ್ನು **ನಿಪಿ 1** ಎಂದು ಮತ್ತು ಸಾಕ್ಷಿಯ ಸಹಿಯನ್ನು **ನಿಪಿ 1(ಎ)** ಎಂದು ಗುರುತಿಸಲಾಯಿತು.

2) ದಿನಾಂಕ 12.06.2018 ರಂದು ಮಾಡಿದ ಕೃತ್ಯ ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಸದರಿ ದಾಖಲೆಯನ್ನು **ನಿಪಿ 2** ಎಂದು ಮತ್ತು ಸಾಕ್ಷಿಯ ಸಹಿಯನ್ನು **ನಿಪಿ 2(ಎ)** ಎಂದು ಗುರುತಿಸಲಾಯಿತು.

ನಿಪಿ 2(ಎ) ರಲ್ಲಿರುವ ಸಹಿಯನ್ನು ನಾನು ಕೃತ್ಯ ನಡೆದ ಸ್ಥಳ ಮಹಜರ್ ಗೆ ಪೊಲೀಸರು ಬಂದಾಗ ಹಾಕಿರುತ್ತೇನೆ. ಗಲಾಟೆಯಾದ 8 ದಿನಗಳ ನಂತರ ನಾನು ನಿಪಿ 2(ಎ) ರಲ್ಲಿರುವ ಸಹಿಯನ್ನು ಮಾಡಿರುತ್ತೇನೆ. ಆ ದಿನ ನನ್ನೊಂದಿಗೆ ಕೃತ್ಯ ಸ್ಥಳ ಮಹಜರ್ ಗೆ ಈರಯ್ಯ ಮತ್ತು

ಅಣ್ಣಯ್ಯ ಎಂಬುವರು ಸಹಿ ಹಾಕಿರುತ್ತಾರೆ. ಪೊಲೀಸರಿಗೆ ನಾನು ಈ ವಿಚಾರವಾಗಿ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಸಾಕ್ಷಿಗೆ ಭಾಗಶಃ ಸಾಕ್ಷಿಯನ್ನು ನುಡಿಯುತ್ತಿರುವುದರಿಂದ ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕ ರವರಿಂದ.</u>**

ದಿನಾಂಕ 12.06.2018 ರಂದು ಕೃತ್ಯ ನಡೆದ ಸ್ಥಳಕ್ಕೆ ಪೊಲೀಸರು ಬಂದು ಬೆಳಗ್ಗೆ 10.00 ರಿಂದ 11.00 ಗಂಟೆಯವರೆಗೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿ. ಗಲಾಟೆಯು ದಿನಾಂಕ 18.05.2018 ರಂದು ಆಗಿರುತ್ತದೆ ಎಂದರೆ ಸರಿ. ಸರ್ವೆ ನಂ 130/3 ರಲ್ಲಿ 1 ಎಕರೆ 17 ಗುಂಟೆ ಜಮೀನನ್ನು ದ್ಯಾವಯ್ಯನ ಮಗ ಬೊಮ್ಮಯ್ಯ ಮತ್ತು ಅವರ ಮಗ ಕೃಷ್ಣ ಎಂಬುವರಿಂದ ನಾವು ಖರೀದಿಗೆ ತೆಗೆದುಕೊಂಡಿರುತ್ತೇವೆ ಎಂದರೆ ಸರಿ. ಅಂದಿನಿಂದಲೂ ನಾವು ಆ ಜಮೀನಿನ ಉಳುಮೆಯನ್ನು ಮಾಡುತ್ತಿರುತ್ತೇವೆ ಎಂದರೆ ಸರಿ. ಸದರಿ ಜಮೀನು ಆರೋಪಿಗೆ ಸೇರಬೇಕೆಂದು ಆರೋಪಿಯು ತಕರಾರು ಮಾಡಿರುತ್ತಾರೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಆರ್.ಸಿ ವಕೀಲರಿಂದಃ</u>**

ನನ್ನ ಗಂಡ ಅಣ್ಣಯ್ಯ. ಚಾಸಾ 3 ಮತ್ತು 4 ನಮ್ಮ ಸಂಬಂಧಿಕರು ಎಂದರೆ ಸರಿ. ಯಾವ ಸರ್ವೆ ನಂಬರ್ ನ್ನು ನೀವು ಪೊಲೀಸರಿಗೆ ಹೇಳಿಕೆ ಸಮಯದಲ್ಲಿ ನೀಡಿರುತ್ತೀರಿ ಎಂದರೆ ಸಾಕ್ಷಿಯು ಸರ್ವೆ ನಂಬರ್ ನನ್ನ ಗಂಡನಿಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ನಮಗೆ ಸದರಿ ಸರ್ವೆ ನಂಬರ್ ತಿಳಿದಿರುವುದಿಲ್ಲ. ಯಾವ ವರ್ಷದಲ್ಲಿ ನಾವು ಸದರಿ ಜಮೀನನ್ನು ಬೊಮ್ಮಯ್ಯ ಮತ್ತು ಕೃಷ್ಣರವರಿಂದ ಖರೀದಿಸಿರುತ್ತೇನೆ ಎಂದು ತಿಳಿದಿರುವುದಿಲ್ಲ. ಆರೋಪಿಯ ಗಂಡನಾದ ಈರಯ್ಯ ರವರ ಜೀವಿತಾವಧಿಯಲ್ಲಿ ನನ್ನ ಗಂಡ ಸದರಿ ಜಮೀನಿನ ಪೈಕಿ 19 ಗುಂಟೆ ಜಮೀನಿಗೆ ಕ್ರಯದ ಕರಾರನ್ನು ಮಾಡಿರುತ್ತಾರೆ ಎಂಬ ವಿಚಾರವು ನಿಮಗೆ ತಿಳಿದಿರುತ್ತದೆಯೇ ಎಂದರೆ ಸಾಕ್ಷಿಯು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡನ ತಮ್ಮನಾದ ಬೊಮ್ಮಯ್ಯ ತೀರಿಕೊಂಡಿರುತ್ತಾರೆ. ಸದರಿ ಜಮೀನನ್ನು ಆ ದಿನವೇ ಆರೋಪಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾವು ಅವರಿಗೆ ಆಸ್ತಿಯನ್ನು ಬರೆದುಕೊಟ್ಟಿರುವುದಿಲ್ಲ ಎಂದು ನುಡಿಯತ್ತಾರೆ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯ ಸಂಗತಿಗಳ ಮಾಹಿತಿ ನನಗೆ ಇರುತ್ತದೆ. ನಾನು ನೀಡಿದ ಹೇಳಿಕೆಯಲ್ಲಿ 17 ಗುಂಟೆ ಜಮೀನನ್ನು ಬೋಗ್ಯಕ್ಕೆ ಮಾಡಿಕೊಂಡಿರಲು ಕೊಟ್ಟಿದ್ದರು ಎಂದು ಹೇಳಿರುವುದಿಲ್ಲ. ಸದರಿ 17 ಗುಂಟೆ ಜಮೀನನ್ನು 15 ವರ್ಷಗಳು ಆರೋಪಿಯ ಗಂಡನೇ ಮಾಡಿಕೊಳ್ಳಿ ಎಂದು ತಿಳಿಸಿ ಗಂಡ ಹೆಂಡತಿ ಇಬ್ಬರು ಅಲ್ಲಿಯೇ 3 ವರ್ಷಗಳು ಬಿಟ್ಟುಕೊಟ್ಟರು ಎಂದು ಬರೆಸಿರುತ್ತೇನೆ. ಇದನ್ನು ಹೊರತುಪಡಿಸಿ ನಾನು ಹೇಳಿಕೆಯನ್ನು ಬೇರೆ ಏನನ್ನು ಬರೆಸಿರುವುದಿಲ್ಲ. ಪೊಲೀಸರಿಗೆ ನಾನು ನೀಡಿದ ಹೇಳಿಕೆಯನ್ನು ಬರೆದುಕೊಂಡ ನಂತರ ಪೊಲೀಸರು ನನಗೆ ಅದನ್ನು ಓದಿ ಹೇಳಿರುವುದಿಲ್ಲ. ಪೊಲೀಸರು ನಮಗೆ ಸದರಿ ವಿಚಾರವನ್ನು

ಓದಿ ತಿಳಿಸದ ಕಾರಣ ನನಗೆ ನಿಪಿ 1 ರಲ್ಲಿ ಏನನ್ನು ಬರೆದಿರುತ್ತಾರೆ ಎಂಬುದರ ಮಾಹಿತಿ ನನಗೆ ಇರುವುದಿಲ್ಲ. ಆ ದಿನ ಸಂಜೆ ನನಗೆ ಪ್ರಜ್ಞೆ ಬಂದಿರುತ್ತದೆ. ಆಗ ಸಮಯ ಎಷ್ಟು ಆಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಸರ್ವೆ ನಂಬರಿನ 19 ಗುಂಟೆ ಜಮೀನನ್ನು ನನ್ನ ಗಂಡ ಆರೋಪಿಗೆ ಕ್ರಯದ ಕರಾರನ್ನು ಮಾಡಿಕೊಟ್ಟ ನಂತರ ಆರೋಪಿಯೇ ಜಮೀನನ್ನು ಉಳುಮೆ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಸದರಿ ವಿಚಾರವು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಅಂದಿನಿಂದಲೂ ಇಲ್ಲಿಯವರೆಗೂ ಸದರಿ ಜಮೀನು ಆರೋಪಿಯ ಸ್ವಾದೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ 19 ಗುಂಟೆ ಜಮೀನನ್ನು ಬಿಡಿಸಿಕೊಳ್ಳಬೇಕೆಂದು ನನ್ನ ಗಂಡ ಆರೋಪಿ ಮತ್ತು ಆಕೆಯ ಮಕ್ಕಳ ವಿರುದ್ದ ಒಂದು ವ್ಯಾಜ್ಯವನ್ನು ಹಾಕಿರುತ್ತಾರೆ ಎಂದರೆ ಸರಿ. ಸದರಿ ವ್ಯಾಜ್ಯದಲ್ಲಿ Injunction order ಪಡೆದು ನಾವು ಈ ಜಮೀನನ್ನು ಆರೋಪಿಯಿಂದ ಬಿಡಿಸಿಕೊಳ್ಳಲು ಹೋಗಿದ್ದೆವು ಎಂದರೆ ಸರಿ. ಸದರಿ ಆಸ್ತಿಯನ್ನು ಬಿಡಿಸಿಕೊಳ್ಳುವ ಉದ್ದೇಶದಿಂದ ಆರೋಪಿಯ ಮೇಲೆ ನಾವು ಹಲ್ಲೆಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಆರೋಪಿಗೆ ಹೊಡೆದು ಆಕೆಯ ಹಲ್ಲುಗಳನ್ನು ಉದುರಿಸಿರುತ್ತೇವೆ ಹಾಗಾಗಿ ನಮ್ಮ ವಿರುದ್ದ ಒಂದು ಪ್ರಕರಣ ದಾಖಲಿಸಿದ್ದು ನಾವು ಉದ್ದೇಶಪೂರ್ವಕವಾಗಿ ಈ ಪ್ರಕರಣವನ್ನು ಆರೋಪಿಯ ವಿರುದ್ದ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆದ್ದರಿಂದ ನಮ್ಮ ವಿರುದ್ದ ಒಂದು ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ.

ನಾವು ಉಳುಮೆ ಮಾಡುತ್ತಿದ್ದೆವು ಎಂದು ಹೇಳಿದ ಟ್ರಾಕ್ಟರ್ ನ ವಾಹನದ ಸಂಖ್ಯೆಯನ್ನು ನೋಡಿರುವುದಿಲ್ಲ. ಆ ಟ್ರಾಕ್ಟರ್ ಚಾಲಕನ ಹೆಸರು ಮತ್ತು ಊರು ನನಗೆ ತಿಳಿದಿರುವುದಿಲ್ಲ. ಮಹಜರ್ ನ್ನು ಬರೆದುಕೊಂಡು ಹೋಗಲಾಗಿದೆ ಎಂದು ಹೇಳುತ್ತಿರುವ ಜಾಗದ ಚಕ್ಕುಬಂದಿಯನ್ನು ಹೇಳಲು ನನಗೆ ಬರುವುದಿಲ್ಲ. ಯಾವ ದಿನಾಂಕದಂದು ಮಹಜರ್ ಮಾಡಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ. ಮಹಜರ್ ನಲ್ಲಿ ಬರೆದಿರುವ ಸಂಗತಿಗಳ ಮಾಹಿತಿ ನನಗೆ ತಿಳಿದಿರುವುದಿಲ್ಲ. ಮಹಜರ್ ನಲ್ಲಿ ಯಾರು ಸಹಿ ಹಾಕಿರುತ್ತಾರೆ ಎಂಬುದು ನನಗೆ ತಿಳಿದಿರುವುದಿಲ್ಲ. ನಾನು ಪೊಲೀಸರಿಗೆ ಯಾವ ತಾರೀಖಿನಂದು ಹೇಳಿಕೆ ನೀಡಿರುತ್ತೇನೆ ಎಂಬುದು ನನಗೆ ತಿಳಿದಿರುವುದಿಲ್ಲ. ನಾನು ನೀಡಿದ ಹೇಳಿಕೆಯಲ್ಲಿ ಯಾವ ಸಂಗತಿಗಳನ್ನು ಬರೆದಿರುತ್ತಾರೆ ಎಂಬುದರ ಮಾಹಿತಿ ನನಗೆ ಇರುವುದಿಲ್ಲ. ಪೊಲೀಸರು ನಿಪಿ 1(ಎ) ಮತ್ತು ನಿಪಿ2 (ಎ) ರಲ್ಲಿರುವ ಸಹಿಗಳನ್ನು ಪೊಲೀಸರು ಪೊಲೀಸ್ ಠಾಣೆಯಲ್ಲಿ ಹಾಕಿಸಿಕೊಂಡಿರುತ್ತಾರೆ ಎಂದರೆ ಸರಿ. ಆರೋಪಿಯು ನನ್ನ ಬೆರಳಿಗೆ ಕಚ್ಚಿರುವುದಿಲ್ಲ, ನನ್ನನ್ನು ಹಿಡಿದು ಎಳೆದಾಡಿರುವುದಿಲ್ಲ, ನನಗೆ ಅವಾಚ್ಯ ಶಬ್ದದಲ್ಲಿ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಜಮೀನಿನಲ್ಲಿ ಉಳುಮೆ ಮಾಡುತ್ತಿರುವ ಸಮಯದಲ್ಲಿ ನಾನು ಬಿದ್ದು ಪೆಟ್ಟು ಮಾಡಿಕೊಂಡು, ಈ ಪ್ರಕರಣದಲ್ಲಿ ಹೇಳಿರುವ ರೀತಿ ನನಗೆ ಗಾಯಮಾಡಿಕೊಂಡಿದ್ದು ನಾನು ಆರೋಪಿಯೇ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಸದರಿ

ಆಸ್ತಿಯನ್ನು ಪಡೆದುಕೊಳ್ಳುವ ದುರುದ್ದೇಶದಿಂದ ನಾನು ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲದಿದ್ದರೂ ಆರೊಪಿಯ ವಿರುದ್ದ ಸುಳ್ಳ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು,**
**ಅರಕಲಗೂಡು.**